**ದೂರಶಿಕ್ಷಣ ನಿರ್ದೇಶನಾಲಯ**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ,
ದೂರವಾಣಿ: ೦೮೩೯೪-೨೧೦೨೦೦, ಫ್ಯಾಕ್ಸ್: ೦೮೩೯೪-೨೪೧೩೩೫, ಮೊ. ೯೪೮೧೨೨೯೪೫
ಇ-ಮೇಲ್ : dde.kuh@gmail.com


---

**ಡಾ. ವಾಸುದೇವ ಬಡಿಗೇರ**
ನಿರ್ದೇಶಕರು

ಸಂಖ್ಯೆ:ಕವಿಹಂ:ದೂಶಿನಿ:ಪರೀಕ್ಷೆ:೨೦೧೮-೧೯ ದಿನಾಂಕ ೧೪.೦೯.೨೦೧೮

ಮಾನ್ಯರೇ

**ವಿಷಯ: ೨೦೧೭–೧೮ರ ಪರೀಕ್ಷೆ ಕುರಿತು ಮಾಹಿತಿ.**

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ ೧೧.೧೦.೨೦೧೮ ರಿಂದ ೧೫.೧೦.೨೦೧೮ರವರೆಗೆ ವಾರ್ಷಿಕ ಪರೀಕ್ಷೆ ವೇಳಾಪಟ್ಟಿಯನ್ನು ನಿಗದಿಪಡಿಸಿ ದಿನಾಂಕ ೧೧.೦೯.೨೦೧೮ರಂದು ವಿಶ್ವವಿದ್ಯಾಲಯದ ಅಂತರಜಾಲದಲ್ಲಿ ಅಳವಡಿಸಲಾಗಿತ್ತು. ಈ ಅವಧಿಯಲ್ಲಿ ಪಿಯುಸಿ ಕಾಲೇಜಿನ ಉಪನ್ಯಾಸಕರ ನೇಮಕಾತಿಗಾಗಿ ಸಿಇಟಿ ಪರೀಕ್ಷೆಗಳು ನಡೆಯುವುದರಿಂದ ನಿಗದಿಪಡಿಸಿದ ವಾರ್ಷಿಕ ಪರೀಕ್ಷೆ ಮುಂದೂಡಲಾಗಿದೆ.

ದಿನಾಂಕ ೨೬.೧೦.೨೦೧೮ ರಿಂದ ೩೦.೧೦.೨೦೧೮ರವರೆಗೆ ೨೦೧೭–೧೮ನೇ ಸಾಲಿನ ಪರೀಕ್ಷೆಗಳು ನಡೆಯುತ್ತವೆ. ವಿದ್ಯಾರಣ್ಯ ಕೇಂದ್ರದ ವಿದ್ಯಾರ್ಥಿಗಳು ಪ್ರವೇಶ ಪತ್ರಗಳನ್ನು ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಬಂದು ಪಡೆದುಕೊಳ್ಳುವುದು.

**ಸೂಚನೆ:**

೧. ದಿನಾಂಕ ೧೫.೧೦.೨೦೧೮ರಿಂದ ಪ್ರವೇಶ ಪತ್ರಗಳನ್ನು ನೀಡಲಾಗುವುದು. [ಅಭ್ಯರ್ಥಿಗಳು ಗುರುತಿನ ಚೀಟಿ (ಐ.ಡಿ. ಕಾರ್ಡ್)ಯನ್ನು ತರುವುದು ಕಡ್ಡಾಯ]

೨. ಪರೀಕ್ಷಾ ಕೇಂದ್ರ ಬದಲಾವಣೆ ಇಚ್ಛಿಸಿದ ವಿದ್ಯಾರ್ಥಿಗಳು ನಿಗದಿತ ಶುಲ್ಕ **ರೂ. ೧೫೦೦/–** ಪಾವತಿಸಿ ಪರೀಕ್ಷಾ ಕೇಂದ್ರ ಬದಲಾವಣೆ ಮಾಡಿಕೊಳ್ಳಲು ೧೦.೧೦.೨೦೧೮ ಕೊನೆಯ ದಿನವಾಗಿರುತ್ತದೆ.

೩. ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಹೆಚ್ಚಿನ ಮಾಹಿತಿಗೆ ದೂ. ೦೯೩೯೪–೨೧೦೨೦೦ಗೆ ಸಂಪರ್ಕಿಸುವುದು ಹಾಗೂ ಪರೀಕ್ಷಾ ಕೇಂದ್ರ ಹಾಗೂ ವೇಳಾಪಟ್ಟಿಗಾಗಿ www.kannadauniversity.org ವೆಬ್‌ಸೈಟ್‌ನ್ನು ನೋಡಬಹುದು.

೪. **ಎಂ.ಎ. ಪ್ರಥಮ ವರ್ಷದ** ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.), ಹಾಗೂ ಪತ್ರಿಕೋದ್ಯಮ ಅಧ್ಯಯನ ಡಿಪ್ಲೊಮ, ಕನ್ನಡ ಸಾಹಿತ್ಯ **ಡಿಪ್ಲೊಮ,** ಪರೀಕ್ಷೆಗಳು **ಬೆಳಗ್ಗೆ ೧೦.೩೦ ರಿಂದ ೧.೩೦ರವರೆಗೆ,**

   **ಎಂ.ಎ. ಅಂತಿಮ ವರ್ಷದ** ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.), ಹಾಗೂ ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ನಾಟಕ ಕಲೆ, ಭಾಷಾಂತರ ಅಧ್ಯಯನ, ಶಾಸನಶಾಸ್ತ್ರ ಅಧ್ಯಯನ, ಮಾಹಿತಿ ಸಂವಹನ **ಡಿಪ್ಲೊಮ** ಪರೀಕ್ಷೆಗಳು **ಮಧ್ಯಾಹ್ನ ೨.೩೦ ರಿಂದ ೫.೩೦ರವರೆಗೆ ನಡೆಯುತ್ತವೆ.**

೫. ವಿದ್ಯಾರ್ಥಿಗಳು ತಮ್ಮ ವಸತಿ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುವುದು.

ನಿರ್ದೇಶಕರು

ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಇವರಿಗೆ,

E:dde:Exam/2017-18/dirletv/35